

**ಕರ್ಕಿ ಕೃಷ್ಣಮೂರ್ತಿ**

# ಆ ಇನ್ನೊಂದು ಜಗತ್ತು...

ಈ ಭೂಮಿಯ ಮೇಲಿನ ಪ್ರತಿ ಸ್ಥಳಕ್ಕೂ ಅದರದೇ ಆದ ಒಂದು ವಿಶಿಷ್ಟ ಪ್ರಾಣಮಯ ಸೂಕ್ಷ್ಮಪ್ರಜ್ಞೀತತ್ವ ಎಂಬುದಿದೆಯೇ? ವಿಶೇಷ ರೂಪದಲ್ಲಿ ಅದು ಇಂದ್ರಿಯಗಳಿಗೆ ಸಂವೇದಿಯಾಗಿ ದಕ್ಕಬಲ್ಲದೇ?

‘ಅಷ್ಟು ವರ್ಷಗಳ ನಂತರ ಮಂಜನನ್ನು ಆ ಜಾಗದಲ್ಲಿ ನೋಡುತ್ತೇನೆಂಬುದನ್ನು ನನ್ನಿಂದ ಊಹಿಸಲೂ ಆಗುತ್ತಿಲ್ಲ’ ಎಂದ ನನ್ನ ಮಿತ್ರ.

ಆತ ಮಂಜನನ್ನು ನೋಡಿದ್ದು ಹೊಳೆಗದ್ದೆಯಲ್ಲಿ. ಕುಮಟಾ ಹೊನ್ನಾವರ ಮಧ್ಯದ ಹೆದ್ದಾರಿಯ ನಡುವೆ ಸಿಗುವ ಸಣ್ಣ ಗ್ರಾಮ ಹೊಳೆಗದ್ದೆ. ನಾಲ್ಕಾರು ಸಣ್ಣ ಹೊಳೆಗಳ ನಡುವಲ್ಲಿ ಹರಡಿಕೊಂಡಿರುವ ಹಸಿರು ಗದ್ದೆಯಿಂದಾಗಿ ಊರಿಗೆ ಆ ಹೆಸರು ಬಂದಿರಬಹುದು. ಸಾಲದೆಂಬಂತೆ, ಒಂದು ಮಗ್ಗುಲಲ್ಲಿ ಹಸಿರು ಬೆಟ್ಟ, ಇನ್ನೊಂದೆಡೆ ಸಮುದ್ರ. ಈ ಭೌಗೋಳಿಕ ಹಿನ್ನೆಲೆ ಹೊಳೆಗದ್ದೆಗೆ ಅಸಾಮಾನ್ಯ ಸೌಂದರ್ಯವನ್ನು ದಕ್ಕಿಸಿಕೊಟ್ಟಿದ್ದಂತೂ ನಿಜ. ಅಲ್ಲಿಯವನೇ ಆದ ನನ್ನ ಗೆಳೆಯ ತನ್ನೂರಿನ ಬಗ್ಗೆ ಅಸಂಖ್ಯ ಬಾರಿ ಪ್ರಸ್ತಾಪಿಸಿದ್ದಾನೆ. ಅಲ್ಲಿಯ ಹೊಳೆ ದಾಟಲು ಮೊದಲೆಲ್ಲ ತೆಪ್ಪ, ದೋಣಿ ಬಳಕೆಯಾಗುತ್ತಿತ್ತು. ನಂತರ ಮೂರು ಸಣ್ಣ ಸಣ್ಣ ಸೇತುವೆಗಳನ್ನು ಕಟ್ಟಲಾಯಿತು. ಕೆಲ ವರ್ಷಗಳ ತರುವಾಯ ಹೆದ್ದಾರಿ ಅಗಲೀಕರಣದ ನೆಪದಲ್ಲಿ ಆ ಮೂರು ಸೇತುವೆಯ ಪಕ್ಕ ಇನ್ನೂ ಎತ್ತರದಲ್ಲಿ ಒಂದೇ ಒಂದು ದೊಡ್ಡ ಸೇತುವೆ ನಿರ್ಮಾಣವಾದದ್ದು. ಆ ಎತ್ತರದ ಸೇತುವೆಯ ಮೇಲೆ ನಿಂತು ನೋಡಿದರೆ ಕೆಳಗೆ ಬಳಕೆಯಾಗದ ಪುಟ್ಟ ಸೇತುವೆಗಳು ಕಾಣುತ್ತಿದ್ದವು. ಮಳೆಗಾಲದಲ್ಲಿ ಅವು ನೀರಲ್ಲಿ ಮುಳುಗಿದ್ದು, ನಂತರ ಪಾಚಿ ಕಟ್ಟಿ ಕಪ್ಪಗಾಗಿ, ಅಲ್ಲಲ್ಲಿ ಶಿಥಿಲವಾಗುತ್ತ, ಕಡೆಗೊಂದು ದಿನ ಕುರುಹೇ ಇಲ್ಲದಂತೆ ಮರೆಯಾಗಿ ಹೋದದ್ದು... ಹೀಗೇ. ಮಳೆಗಾಲದಲ್ಲಿ ಹೊಳೆಗಳು ತಮ್ಮ ಆಕಾರ ಹಾಗೂ ಗಾತ್ರವನ್ನು ಬದಲಾಯಿಸಿಕೊಳ್ಳುವಾಗ ಅವುಗಳೊಡನೆ ಅಷ್ಟಷ್ಟೇ ಕರಗುವ ಗದ್ದೆಗಳು ಅಲ್ಲಿ ಸೃಷ್ಟಿಸುವ ಪ್ರಾಕೃತಿಕ ವಿಸ್ಮಯವನ್ನು ವರ್ಣಿಸುವಾಗ ಆತನ ಕಣ್ಣುಗಳು ಹೊಳೆಯುತ್ತಿದ್ದವು. ಆಗೆಲ್ಲ ನಾನು, ‘ಹೊಳೆಯೊಳಗೆ ಗದ್ದೆಯೋ, ಗದ್ದೆ ಹೊಳೆಯೊಳಗೋ, ಹೊಳೆ ಗದ್ದೆಗಳೆರಡೂ ನಿನ್ನೊಳಗೋ?’ ಎಂದು ಕೇಳುತ್ತ ಆತನಿಗೆ ತಮಾಷೆ ಮಾಡುತ್ತಿದ್ದೆ.

ಊರಿನಷ್ಟೇ ಆತ ಹಚ್ಚಿಕೊಂಡದ್ದು ಬಾಲ್ಯ ಸ್ನೇಹಿತ ಮಂಜನನ್ನು. ಆ ವಯಸ್ಸಿಗೇ ತೆಪ್ಪ ನಡೆಸಲು ಕಲಿತಿದ್ದ ಮಂಜ. ಸೇತುವೆಯಾದ ಮೇಲೂ ಈ ನನ್ನ ಗೆಳೆಯ ಹಾಗೂ ಮಂಜ ತೆಪ್ಪದ ಮುಖಾಂತರವೇ